# ಅವಳೆದೆಯ ಮಲ್ಲಿಗೆ

ಜನದಟ್ಟಣೆಯ ರಸ್ತೆಯ ಸಿಗ್ನಲ್ ದಾಟುವ ಗಡಿಬಿಡಿಯಲ್ಲಿ ಜನ ತುದಿಗಾಲಲ್ಲಿ ನಿಂತಿದ್ದರು. ವಾಹನಗಳು ಬುಸುಗುಟ್ಟುತ್ತಿದ್ದವು. ಹಸಿರು ನಿಶಾನೆ ಬಿತ್ತು, ಜನ ಮುನ್ನುಗ್ಗುತ್ತಿದ್ದರು. ರಸ್ತೆ ಕ್ರಾಸ್ ಮಾಡುವಲ್ಲಿ ಹಿಂದು ಮುಂದಾದ ಅತ್ತ ಇತ್ತ ಚೆದುರಿ ನುಗ್ಗುವಂತೆ ಜನ ಹರಿಯುತ್ತಿದ್ದರು. ಅವಳು ಯಾರೊ ಆ ಚೆಲುವೆ ರಸ್ತೆ ದಾಟುವ ಧಾವಂತದಲಿ ದಾಪುಗಾಲಿಟ್ಟಂತೆಯೆ ಆಗ ತಾನೆ ಮುಡಿದಿದ್ದ ದುಂಡು ಮಲ್ಲಿಗೆಯ ಜಡೆ ಅನಾಯಾಸವಾಗಿ ಆ ಜೀಬ್ರಾ ಕ್ರಾಸಿನಲ್ಲಿ ಬಿದ್ದು ಹೋಯಿತು. ಗದ್ದಲದಲ್ಲೂ ಅದನ್ನು ಆತ ಗಮನಿಸಿದ. ಪಾದಚಾರಿಗಳ ಕಾಲ ತುಳಿತಕ್ಕೆ ಅವಳೆದೆಯ ಮಲ್ಲಿಗೆ ಹೂ ಸಿಲುಕಿತ್ತು. ಆ ಕೋಮಲ ಹೂವನ್ನು ಎತ್ತಿಕೊಳ್ಳಲು ಮುಂದಾದಂತೆಯೇ ತಳ್ಳಲ್ಪಟ್ಟು ಮುಗ್ಗರಿಸಿ ಹಿಂದೆ ಬಂದ. ಮತ್ತೆ ಸಿಗ್ನಲ್ ಇನ್ನೊಂದು ಕಡೆಯ ವಾಹನಗಳಿಗೆ ದಾರಿ ತೋರಿತು. ಬರ್ರೋ ಎಂದು ವಾಹನಗಳು ನುಗ್ಗಿ ಬಂದವು. ರಸ್ತೆಗಳಡಿ ಸಿಲುಕಿ ಆ ಹೂವು ಅಪ್ಪಚ್ಚಿಯಾಗಿ ಇನ್ನರ್ಧ ನಳನಳಿಸುತ್ತಲೆ ಇತ್ತು. ಹೊಗೆಯುಗುಳುತ್ತ ವಾಹನಗಳು ಅವಳೆದೆಯ ಮೇಲೆ ಜಾರಿಹೋದಂತೆ ಮಾಯವಾದವು.

ಆತ ಆ ಗಾಯಗೊಂಡ ಹೂವ ಎತ್ತಿಕೊಂಡ. ಅವನ ಕೈಗೆ ಅವಳ ನೆತ್ತರು ಅಂಟಿ ಕೊಂಡಂತಾಗಿತ್ತು. ಎದೆಗೆ ಒತ್ತಿಕೊಂಡು, ಆ ಹೂವು ಮುಡಿದಿದ್ದವಳ ಕೂಗಿದ. ಅವಳಾಗಲೇ ಜನ ದಟ್ಟಣೆಯ ಆಚೆ ತಿರುವಿನಲ್ಲಿದ್ದಳು. ಆದರೂ ಬಿಡದೆ ಕರೆದ. ಆತ ಬಡಪಾಯಿ ಭಾವಜೀವಿ. ಅವನತ್ತ ಯಾರೂ ನೋಡಲಿಲ್ಲ. ಅವಳೊ, ಅವಳಲ್ಲವೊ ಎಂದನುಮಾನಿಸುತ್ತ 'ಹಲ್ಲೋ ನಿಲ್ಲೀ' ಎಂದು ಕರೆದ. ಅಸಂಗತವಾಗಿತ್ತು. ಯಾರೊ ಯಾರಿಗೊ ಹಿಂತಿರುಗಿ ನಾಳೆ ಸಿಗುವೆ ಎಂದು ಸನ್ನೆ ಮಾಡುತ್ತಿದ್ದರು. ಫುಟ್‌ಪಾತಿನ ತುಂಬ ಆ ರಶ್ ಅವರ್‌ನಲ್ಲಿ ಜನ ಗಡಿಬಿಡಿಯಲ್ಲಿ ಓಡಿ ಹೋಗುವಂತೆ ಸಾಗುತ್ತಿದ್ದರು. ಅವನ ಆ ಅಂತಃಕರಣದ ಪ್ರೇಮ ಬಹಳ ಹಳೆಯ ಕಾಲದ್ದು. ಮನುಷ್ಯರ ಜಂಜಡಗಳಲ್ಲಿ ಕಾಲ ವೇಗ ಹೆಚ್ಚಿಸಿಕೊಂಡಿತ್ತು. ಆ ಹೂವನ್ನು ಬಿಸಾಡಲು ಮನಸ್ಸಾಗಲಿಲ್ಲ. ಚಡಪಡಿಸಿದ. ಆ ಹೂವೇ ಅವನ ಕೈ ಹಿಡಿದುಕೊಂಡು, 'ನಡೆ, ಹೋಗುವ' ಎಂದಂತಾಯಿತು. ಮನುಷ್ಯರ ನಾಗರಿಕತೆಗೆ ರಸ್ತೆಗಳ ಸಿಗ್ನಲ್‌ಗಳು ಕೆಂಪು ಹಳದಿ ಹಸಿರು ದೀಪಗಳ ಸೂಚಿಸುತ್ತಲೇ ಇದ್ದವು. ಅಷ್ಟೊಂದು ಜನ ಜಾತ್ರೆಯಲ್ಲಿ ಯಾರು ಯಾರ ಮುಖವನ್ನೂ ನೋಡುತ್ತಿರಲಿಲ್ಲ. ಮಾತನಾಡುತ್ತಿರಲಿಲ್ಲ; ಅಳುತ್ತಲೂ ನಗುತ್ತಲೂ ಇರಲಿಲ್ಲ. ಯಾರು ಯಾರನ್ನೂ ಕಾಯುತ್ತಿರಲಿಲ್ಲ; ಹುಡುಕುತ್ತಿರಲಿಲ್ಲ...

ಆ ಹೂವಿನ ಮುಖವನ್ನು ಅಂಗೈಯಲ್ಲಿಟ್ಟು ದಿಟ್ಟಿಸಿದ. ಇದು ತನ್ನ ದಾರಿಯ ದೇವರ ಹೂವೇ ಎಂದು ಕೇಳಿಕೊಂಡ. ಅದರ ಅನಂತವಾದ ಸುವಾಸನೆಯನ್ನು ಆಘ್ರಾಣಿಸಿದ. ಭಾಗಶಃ ದೇವರು ಹೆಂಗಸರ ಪ್ರೇಮದ ಮೋಹದಲಿ ಹೂವಾಗಿ ಬಂದು ಅವರ ಮುಡಿಯಲ್ಲಿ ಕೂತಿರುತ್ತದೇನೋ... ಅದಕ್ಕೇ ಹೆಂಗಸರೆಂದರೆ ಹೂವಿಗಾಗಿ ಅಷ್ಟೊಂದು ಬಯಸುವವರೇನೊ... ಈಗ, ಈ ಹೂವು, ಈ ದೇವರು, ಈ ಹೆಣ್ಣುಗಳ ನಡುವೆ ನಾನು ಯಾರು ಎಂದು ಕೇಳಿಕೊಂಡ. ಕಚೇರಿಗೆ ಹೊತ್ತಾಗುತ್ತಿತ್ತು. ಹೂವನ್ನು ಬಿಸಾಡದೆ ಮನಸ್ಸಿನ ಸುಪ್ತ ಪ್ರಪಂಚದಲ್ಲಿ ಬಚ್ಚಿಟ್ಟುಕೊಂಡು ಮುಂದೆ ನಡೆದ. ರಸ್ತೆಗಳ ಕಾಲ ಪ್ರವಾಹದಲಿ ಜನ ಹರಿಯುತ್ತಲೇ ಇದ್ದರು. ಜಗತ್ತಿನಲ್ಲಿ ಯಾವುದೂ ಒಂಟಿ ಅಲ್ಲ ಎಂಬ ಆತ್ಮವಿಶ್ವಾಸ ಅವನಲ್ಲಿ ಮೂಡಿತ್ತು. ಅವನ ಅಂತರಂಗದಲ್ಲಿ ಅವಳ ಆ ಹೂ ಅರಳುತ್ತಿತ್ತು.